ಓ.ಎಸ್.ನಂಃ 52/2020

ಪಿಡಬ್ಲ್ಯೂ-1

<u>ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 08.09.2023 ರಂದು ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲು :ಶ್ರೀ ಜೆ ಎಸ್ ವಕೀಲರಿಂದ (1 ನೇ ಪ್ರತಿವಾದಿ ಪರವಾಗಿ)</u>

ನಾನು ಪಿ ಯು ಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ಮೊದಲು ಕಂದಾಯ ಇಲಾಖೆಯಲ್ಲಿ ಗ್ರಾಮ ಲೆಕ್ಕಾಧಿಕಾರಿಯಾಗಿ ನಂತರ ಆರ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಈ ದಾವೆಯನ್ನು ದಾವಾಸ್ತಿಯ ಮೇಲೆ ನನ್ನ ಹಕ್ಕನ್ನು ಉಳಿಸಿಕೊಳ್ಳಲು ಹೂಡಿರುತ್ತೇನೆ. ಈ ದಾವೆಯನ್ನು ನಾನು ತಡೆಯಾಜ್ಞೆ ಕೋರಿ ಹೂಡಿರುತ್ತೇನೆ. ದಾವಾಸ್ತಿಯ ಸರ್ವೇ ನಂಬರ್ 137/1 ಆಗಿರುತ್ತದೆ. ನನಗೆ ಈ ದಾವೆಯ ಸಂಪೂರ್ಣ ವಿವರಗಳು ಗೊತ್ತು. ಪ್ರತಿವಾದಿ ಚಿಕ್ಕರಂಗಯ್ಯ ನನ್ನ ಸಂಬಂಧಿ. ಸದರಿ ಚಿಕ್ಕರಂಗಯ್ಯರವರು ಓಸ್ ನಂ. 123/2008 ರಲ್ಲಿ ದಾವೆಯನ್ನು ಹೂಡಿದ್ದರು. ಸದರಿ ದಾವೆಯನ್ನು ಸ.ನಂಬರ್ 137/1 ಕ್ಕೆ ಸಂಬಂಧ ಪಟ್ಟಂತೆ ಹೂಡಿದ್ದರು ಎಂದರೆ ಸರಿ. ಘೋಷಣಾತ್ಮಕ ಪರಿಹಾರ ಮತ್ತು ತಡೆಯಾಜ್ಞೆಗಾಗಿ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆಯು ಅವರ ಪರವಾಗಿ ಡಿಕ್ರಿ ಆಗಿದೆ ಎಂದರೆ ಸರಿ. ಸದರಿ ಡಿಕ್ರಿ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ವಜಾ ಆದೇಶದ ವಿರುದ್ದ ನಾನು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಸರ್ವೇ ನಂಬರ್ 137/1 ಕ್ಕೆ ಸಂಬಂಧ ಪಟ್ಟಂತೆ ಪ್ರತಿವಾದಿಗಳು ದಾವೆ ಹೂಡಿದ್ದರು ಎಂದರೆ ಸರಿ. ಅದೇ ಆಸ್ತಿಯ ಮೇಲೆ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ.

ಪ್ರತಿವಾದಿಗಳಿಗೆ ಸರ್ವೇ ನಂಬರ್ 137/1 ರಲ್ಲಿ 1 ಎಕರೆ 30 ಗುಂಟೆ ಆಸ್ತಿ ಇರುತ್ತದೆ. ಓಸ್ ನಂ. 123/2008 ರ ದಾವೆಯಲ್ಲಿ ಇದ್ದಂತಹ ಪಕ್ಷಕಾರರ ವಿರುದ್ಧವೇ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಸರ್ವೇ ನಂಬರ್ 137/1 ರ ಆರ್ ಟಿ ಸಿ ಅಂಕಯ್ಯ ಮತ್ತು ಚಿಕ್ಕರಂಗಯ್ಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ನನಗೆ ತಿಳಿಯದಂತೆ ಮಾಡಿಸಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಈ ಪ್ರಸ್ತುತ ದಾವೆಯಲ್ಲಿರುವ ಸಂಗತಿಗಳನ್ನು ಓ ಎಸ್ ನಂ. 123/2008 ರಲ್ಲಿ ನಮೂದು ಮಾಡಿದ್ದೆ ಎಂದರೆ ಸರಿ. ಸದರಿ ದಾವೆಯನ್ನು ನ್ಯಾಯಾಲಯ ಅಂತಿಮವಾಗಿ ವಜಾ ಮಾಡಿರುತ್ತದೆ ಎಂದರೆ ಸರಿ. ಸದರಿ ದಾವೆಯು ಡಿಕ್ರಿ ಆದ ನಂತರ ಪ್ರತಿವಾದಿಗಳು ನನ್ನ ವಿರುದ್ಧ ಅಮಲ್ಜಾರಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅಮಲ್ಜಾರಿ ಅರ್ಜಿಗೆ

ನಾನು ತಕರಾರು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ತಕರಾರಿನಲ್ಲಿ ನಾನು ಪ್ರತಿವಾದಿಗಳಿಗೆ ತೊಂದರೆ ಕೊಡುತ್ತಿಲ್ಲ ಎಂದು ನಮೂದು ಮಾಡಿದ್ದೆ ಎಂದರೆ ಸರಿ.

ಓ ಎಸ್ ನಂ. 123/2008 ರಲ್ಲಿ ಸಲ್ಲಿಸಿದ್ದ ದಾವೆಯು ಸುಳ್ಳು ಸಂಗತಿಗಳಿಂದ ಕೂಡಿದ್ದರಿಂದ ನ್ಯಾಯಾಲಯ ವಜಾ ಮಾಡಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಗಳ ಹೆಸರಿನಲ್ಲಿ ಆಗಿರುವಂತಹ ಖಾತಾ ಬದಲಾವಣೆಯನ್ನು ನಾನು ರೆವೆನ್ಯೂ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ. ನ್ಯಾಯಾಲಯದಲ್ಲಿ ತೀರ್ಪು ಮತ್ತು ಡಿಕ್ರಿಯಂತೆ ಪ್ರತಿವಾದಿಗಳು ದಾವಾಸ್ತಿಯಲ್ಲಿ ಸ್ವಾಧೀನದಲ್ಲಿದ್ದರೂ ಸಹ, ನಾನು ತೊಂದರೆ ಕೊಡಲು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಯಲ್ಲಿ ಪ್ರತಿವಾದಿಗಳ ವಿರುದ್ಧ ಯಾವುದೇ ದೂರು ನೀಡಿರುವುದಿಲ್ಲ. ಪ್ರತಿವಾದಿಗಳು ತೊಂದರೆ ಕೊಟ್ಟಿದ್ದರೆ ಪೊಲೀಸ್ ಠಾಣೆಯಲ್ಲಿ ದೂರು ನೀಡುತ್ತಿದ್ದೆ, ಪ್ರತಿವಾದಿಗಳು ತೊಂದರೆ ಕೊಡದ ಕಾರಣ ನಾನು ದೂರು ನೀಡಿಲ್ಲ ಎಂದರೆ ಸರಿಯಲ್ಲ. ಸುಮಾರು ಮೂರು ತಿಂಗಳ ಹಿಂದೆ ಪ್ರತಿವಾದಿಗಳು ನನ್ನ ವಿರುದ್ಧ ದೂರನ್ನು ನೀಡಿದ್ದರು ಎಂದರೆ ಸರಿ. ಪೊಲೀಸರು ನನ್ನನ್ನು ಕರೆಸಿ, ಪ್ರತಿವಾದಿಗಳಿಗೆ ತೊಂದರೆ ಕೊಡಬಾರದು ಎಂದು ಹೇಳಿದ್ದರು ಎಂದರೆ ಸರಿ. ಪ್ರತಿವಾದಿಗಳಿಗೆ ನಾನೇ ತೊಂದರೆ ನೀಡಿದ್ದರೂ, ಪ್ರತಿವಾದಿಗಳು ನನಗೆ ತೊಂದರೆ ನೀಡುತ್ತಿದ್ದಾರೆ ಎಂದು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತೊಂದರೆ ನೀಡಿದಿದ್ದರೂ ನಾನು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನಗೆ ಯಾವುದೇ ತೊಂದರೆ ನೀಡಿಲ್ಲ. ದಾವಾಸ್ತಿಯ ಮೇಲಿನ ನನ್ನ ಹಕ್ಕನ್ನು ಉಳಿಸಿಕೊಳ್ಳಲು ಈ ದಾವೆ ಹೂಡಿರುತ್ತೇನೆ.

**2 ನೇ ಪ್ರತಿವಾದಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ತಮ್ಮ ಪರವಾಗಿ ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಎ.ಎನ್.ಕಾಂತಮ್ಮ)**
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಗುಂಡ್ಲುಪೇಟೆ